**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 11/2016
ಪಿಡಬ್ಲು : 6 ಸಿಡಬ್ಲು : 5

| | |
|---|---|
| ಸಾಕ್ಷಿಯ ಹೆಸರು | : ಶ್ರೀ.ಚೆನ್ನಪ್ಪ ಅಸೋದೆ |
| ತಂದೆಯ ಹೆಸರು | : ಶ್ರೀ.ಅರ್ಜುನ |
| ವಯಸ್ಸು | : 40 ವರ್ಷ |
| ಉದ್ಯೋಗ | : ಕೂಲಿ ಕೆಲಸ |
| ವಾಸ್ತವ್ಯ | : ಮೊರಬ, ತಾಲೂಕುಃ ರಾಯಬಾಗ |
| ದಿನಾಂಕ | : 17-04-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು. |

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಚಾಸಾಃ 1 ಪ್ರಭಾಕರ, ಚಾಸಾಃ 4 ದಿಲೀಪ, ಚಾಸಾಃ 6 ಫಿರೋಜ, ಚಾಸಾಃ 7 ಬೈರಪ್ಪ, ಚಾಸಾಃ 8 ದಿವಾಕರ ನನಗೆ ಗೊತ್ತಿರುತ್ತಾರೆ, ಅವರು ನಮ್ಮೂರಿನವರು. ನಾನು ಹಿಂದೂ ಧರ್ಮದ ಹೊಲೆಯರ ಜಾತಿಗೆ ಸೇರಿದ್ದೇನೆ.

2. ಆರೋಪಿತರೆಲ್ಲರೂ ನನಗೆ ಗೊತ್ತಿರುತ್ತಾರೆ, ಅವರು ನಮ್ಮೂರಿನವರು, ಅವರು ಲಿಂಗಾಯತ ಜಾತಿಗೆ ಸೇರಿದ್ದಾರೆ.

3. ದಿನಾಂಕಃ 01-10-2015 ರಂದು ರಾತ್ರಿ ಸಮಯದಲ್ಲಿ ನಾನು, ಪ್ರಭಾಕರ ಮತ್ತು ದಿಲೀಪ ರವರು ದಿಲೀಪ ಅವರ ಅಂಗಡಿಯಲ್ಲಿ ಮಲಗಿಕೊಂಡಿದ್ದೇವು. ಆರೋಪಿತರು ಅಲ್ಲಿಗೆ ಬಂದು ಬಾಗಿಲು ಬಡೆಯುತ್ತಿದ್ದರು, ಆಗ ಸಮಯ ರಾತ್ರಿ 12:00 ಗಂಟೆ ಆಗಿತ್ತು, ನಾನು ಬಾಗಿಲು ತೆಗೆದೆನು, ಆಗ 1ನೇ ಆರೋಪಿ ಅಣ್ಣಪ್ಪ ಅವರು

ಪ್ರಭಾಕರ ಅವರ ಜಾತಿ ಹೆಸರು ಹಿಡಿದು ಅವಾಚ್ಯವಾಗಿ ಬೈದು ಪ್ರಭಾಕರ ಎಲ್ಲಿದ್ದಾನೆ ಎಂದು ಕೇಳಿದನು.

4. 1ನೇ ಆರೋಪಿ ಅಣ್ಣಪ್ಪ ಮತ್ತು 4ನೇ ಆರೋಪಿ ಸುರೇಶ ಅವರು ಪ್ರಭಾಕರ ಅವರಿಗೆ ಕೈಯಿಂದ ಹೊಡೆದರು ಮತ್ತು 6ನೇ ಆರೋಪಿ ಸುಶೀಲಾ ಅವರು ಪ್ರಭಾಕರನ ಗುಪ್ತಾಂಗವನ್ನು ಹಿಡಿದು ಹಿಸುಕಿದರು. ಬಿಡಿಸಲು ಹೋದಾಗ ನನಗೆ ಮತ್ತು ದಿಲೀಪ ಅವರಿಗೆ 4ನೇ ಆರೋಪಿ ಸುರೇಶ ಮತ್ತು 11 ನೇ ಆರೋಪಿ ಅಪ್ಪಾಸಾಬ ಕೈಯಿಂದ ಹೊಡೆದರು. ಚಾಸಾಃ 6 ಫಿರೋಜ ಮತ್ತು ಚಾಸಾಃ 7 ಬೈರಪ್ಪ ಅವರು ಬಂದು ನಮ್ಮನ್ನು ಆರೋಪಿತರಿಂದ ಬಿಡಿಸಿಕೊಂಡರು.

5. ಮರುದಿನ ಪ್ರಭಾಕರ ಅವರು ಪೋಲಿಸರಿಗೆ ದೂರನ್ನು ನೀಡಿದ್ದಾರೆ. ನಂತರ ಪೋಲಿಸರು ನಮ್ಮನ್ನು ಕುಡಚಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಈ ಬಗ್ಗೆ ಪೋಲಿಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿದ್ದಾರೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲಿಗಾಗಿ ಮಧ್ಯಾಹ್ನದ ಅವಧಿಗೆ ಪ್ರಕರಣವನ್ನು ಕಾಯ್ದಿರಿಸಲಾಯಿತು.

**ಸಾಕ್ಷಿಯನ್ನು ಪುನಃ ಮಧ್ಯಾಹ್ನ ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

ಎಲ್ಲಾ ಪ್ರತ್ಯಕ್ಷ ಸಾಕ್ಷಿದಾರರ ಪಾಟೀ ಸವಾಲನ್ನು ಒಟ್ಟಿಗೆ ಒಂದೇ ದಿನ ಮಾಡಲು ಅನುವು ಮಾಡಿಕೊಡಬೇಕು ಎಂದು ಆರೋಪಿ ಪರ ವಕೀಲರು ಮನವಿ ಮಾಡಿರುತ್ತಾರೆ. ಮನವಿಯನ್ನು ಪರಿಗಣಿಸಿ ಪಾಟೀ ಸವಾಲಿಗಾಗಿ ಪ್ರಕರಣವನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.

ದಿನಾಂಕ : 21-07-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

**ಪಾಟೀ ಸವಾಲುಃ 4, 8, 10 ಮತ್ತು 11 ನೇ ಆರೋಪಿತರ ಪರ**

**ಶ್ರೀ.ಯು.ಬಿ.ಜೆ ವಕೀಲರಿಂದಃ**

6. ಚಾಸಾ-4 ಫ್ರಾಸಾ-5 ದೀಲಿಪ ಚಾಸಾ-8 ದೀವಾಕರ ನನ್ನ ಅಣ್ಣ ತಮ್ಮಂದಿರು ಎನ್ನುವುದಕ್ಕೆ ದೊಡ್ಡಪ್ಪ ಚಿಕ್ಕಪ್ಪನ ಮಕ್ಕಳು ಎಂದು ಹೇಳಿದ್ದಾರೆ. ನಾನು ಕೂಲಿ ಕೆಲಸ ಮಾಡುತ್ತೇನೆ. ಘಟನೆ ಆದ ದಿನ ನಾನು ಕೆಲಸಕ್ಕೆ ಹೋಗಿರಲಿಲ್ಲ. ಘಟನೆ ನಡೆದ ದಿನ ರಾತ್ರಿ 9.30 ಗಂಟೆಗೆ ನಾನು ದೀಲಿಪನ ಅಂಗಡಿಗೆ ಮಲಗಲು ಹೋಗಿದ್ದೇನು. ಆ ಸಮಯದಲ್ಲಿ ನನ್ನ ಮದುವೆ ಆಗಿರಲಿಲ್ಲ. ನಮ್ಮ ಮನೆಯಲ್ಲಿ 4 ಜನ ವಾಸ ಇದ್ದೇವು. ನಮ್ಮ ಮನೆಯಲ್ಲಿ ಒಂದು ರೂಮ ಇರುತ್ತದೆ. ಸುಮಾರು 2 ವರ್ಷಗಳಿಂದ ನಾನು ದೀಲಿಪನ ಅಂಗಡಿಯಲ್ಲಿ ರಾತ್ರಿ ಮಲಗಿಕೊಳ್ಳುತ್ತಿದ್ದೇನು. ಅಂಗಡಿಯಲ್ಲಿಯೂ ಸಹ ಒಂದೆ ರೂಮ ಇತ್ತು. ಅದು 20 ಮೀಟರ ಉದ್ದ ಅಗಲ ಇರುತ್ತದೆ. ಅಂಗಡಿಯಲ್ಲಿ ಒಂದು ದೊಡ್ಡ ಮಶಿನು ಮತ್ತು ಒಂದು ಸಣ್ಣ ಮಶಿನು ಇತ್ತು. ದೀಲಿಪ ಕೆಲಸ ಮಾಡಲು ಕೆಸಗಾರರನ್ನು ನೇಮಿಸಿಕೊಂಡಿದ್ದನೊ ಇಲ್ಲವೊ ನನಗೆ ಗೊತ್ತಿಲ್ಲ ನಾನು ರಾತ್ರಿ ವೇಳೆಯಲ್ಲಿ ಮಾತ್ರ ಮಲಗಿಕೊಳ್ಳಲು ಹೋಗುತ್ತಿದ್ದೇನು.

7. ನಾನು ರಾತ್ರಿ 9.30 ಗಂಟೆಗೆ ಮಲಗಿಕೊಳ್ಳಲು ಅಂಗಡಿಗೆ ಹೋಗಿದ್ದೇನು ಅದೆ ಸಮಯದಲ್ಲಿ ಪ್ರಭಾಕರನು ಸಹ ಬಂದನು. ಆ ಸಮಯದಲ್ಲಿ ದೀಲಿಪ ಸಹ ಕೆಲಸ ಮುಗಿಸಿದ್ದು ಮಲಗಿಕೊಳ್ಳುವ ಸ್ಥತಿಯಲ್ಲಿದ್ದನು. ಆ ದಿನ ನಾವು ರಾತ್ರಿ 10.30 ಗಂಟೆಗೆ ಮಲಗಿಕೊಂಡೆವು. ಆ ಸಮಯದಲ್ಲಿ ಪ್ರಭಾಕರನಿಗೆ 11.30 ಕ್ಕೆ ಫೋನ ಬಂದಿತ್ತು ಅವನು ನನ್ನ ಎಬ್ಬಿಸಿದನು. ಆರೋಪಿತರು ಪ್ರಭಾಕರ ಅವರ ಮನೆಗೆ ಹುಡಕಿಕೊಂಡು ಹೋಗಿದ್ದರು ಎಂದು ನಂತರ ದೀಲಿಪನ ಅಂಗಡಿ ಕಡೆಗೆ ಬರುತ್ತಿದ್ದಾರೆ ಎಂದು ಗೊತ್ತಾಯಿತು. ನಮಗೆ ಏನು ಹೆದರಿಕೆ ಆಗಿರಲಿಲ್ಲ. ಪ್ರಭಾಕರನಿಗೆ ಸ್ವಲ್ಪ ಹೆದರಿಕೆ ಆಗಿತ್ತು.

8. ಸುಮಾರು 11.30 - 11.35 ರ ಸಮಯದಲ್ಲಿ ಆರೋಪಿತರು ಅಂಗಡಿ ಬಳಿ ಬಂದರು. ನಾವು ಅಂಗಡಿಯ ಬಾಗಿಲು ಹಾಕಿಕೊಂಡು ಮಲಗಿದ್ದೇವು. ಆರೋಪಿತರ ಬಾಗಿಲು ಬಂದು ಬಡಿದರು. ಬಾಗಿಲು ತೆಗೆಯಬಾರದೆಂದು ಪ್ರಭಾಕರ ನನಗೆ ಹೇಳಿರಲಿಲ್ಲ. ಬಾಗಿಲ ಬಡಿದ ಶಬ್ದ ಆದ ಕೂಡಲೇ ನಾನು ಬಾಗಿಲು ಅಂದರೆ ತೆಗೆದನು. ಬಾಗಿಲು ತೆಗೆದ

ಕೂಡಲೆ ಸುರೇಶ ಹಳಿಜೋಳೆ ಮೊದಲು ಒಳಗೆ ನುಗ್ಗಿದರು. ಅವರು ಶೇಟರನ್ನು ಎಳೆಯಲಿಲ್ಲ ಕೂಡಲೆ ಪ್ರಭಾಕರನಿಗೆ ಕೈಯಿಂದ ಹೊಡೆಯಲು ಪ್ರಾರಂಭಿಸಿದರು. ನಾನು ಮತ್ತು ದೀಲಿಪ ಬಿಡಿಸಲು ಪ್ರಯತ್ನ ಪಟ್ಟೆವು ಆಗ ಅವರು ನಮ್ಮನ್ನು ಬಡೆದರು. ನಮಗೂ ನಿಮಗೂ ಯಾವ ಜಗಳವಿಲ್ಲ ನಮಗೆಕೆ ಹೊಡೆಯುತ್ತಿದ್ದಿರಿ ಎಂದು ಕೇಳುವ ಮೊದಲೆ ನಮ್ಮನ್ನು ಹೊಡೆದರು. ನಿಮ್ಮನ್ನು ಯಾರು ಹೊಡೆದರು ಎನ್ನುವ ಪ್ರಶ್ನೆಗೆ ಎಲ್ಲಾ 11 ಜನರು ಸೇರಿ ಹೊಡೆದಿದ್ದಾರೆ. ನಾನು ಗೋಡೆಗೆ ಒರಗಿಕೊಂಡು ನಿಂತಿದ್ದೇನು. ಆದರೆ ನಾನು ಧರಿಸಿದ ಬಟ್ಟೆಗಳು ಹರಿದಿರಲಿಲ್ಲ. ಘಟನೆಯಲ್ಲಿ ನನಗೆ ರಕ್ತ ಗಾಯ ಆಗಿರಲಿಲ್ಲ ಆದರೆ ಒಳಪೆಟ್ಟು ಆಗಿತ್ತು.

9. ಸುಮಾರು 35 ನಿಮಿಷ ಜಗಳ ಆಯಿತು. ಸಾಕ್ಷಿ ಸ್ವತಃ ರಾತ್ರಿ 12.05 – 12.10 ರ ಸಮಯದಲ್ಲಿ ಫಿರೋಜ ಚೌಗಲಾ ಮತ್ತು ಭೈರಪ್ಪ ಚೌಗಲಾ ನಾವು ಚಿರಾಡುವುದನ್ನು ಕೇಳಿಸಿಕೊಂಡು ಬಂದು ನಮ್ಮನ್ನು ಬಿಡಿಸಿದರು. ಘಟನೆಯಲ್ಲಿ ಪ್ರಭಾಕರ ಧರಿಸಿದ ಬಟ್ಟೆ ಸ್ವಲ್ಪ ಹರಿದಿತ್ತು, ದೀಲಿಪ ಧರಿಸಿದ ಬಟ್ಟೆ ಹರಿದಿರಲಿಲ್ಲ. ಅವರಿಬ್ಬರಿಗೂ ಸಹ ಒಳ ಪೆಟ್ಟು ಆಗಿತ್ತು. ಫೀರೊಜ ಚೌಗಲಾ ಎನ್ನುವವರು ಹಿಂದೂ ಧರ್ಮದವರು. ಫಿರೋಜ ಚೌಗಲಾ ಮತ್ತು ಭೈರಪ್ಪ ಚೌಗಲಾ ಅಣ್ಣ ತಮ್ಮಂದಿರಾ ಎನ್ನುವುದಕ್ಕೆ ಇರಬಹುದು ಎಂದು ಹೇಳಿದ್ದಾರೆ. ಅವರಿಬ್ಬರು ನಮ್ಮ ಊರಿನವರು ಆದರೆ ನನಗೆ ಹೆಚ್ಚಾಗಿ ಪರಿಚಯ ಇರುವುದಿಲ್ಲ. ಫಿರೋಜ ಚೌಗಲಾ ಮತ್ತು ಭೈರಪ್ಪ ಚೌಗಲಾ ಬೈಕನಲ್ಲಿ ಬಂದಿದ್ದರು ಅದು ಯಾವ ಗಾಡಿ ಎಂದು ನನಗೆ ಗೊತ್ತಿರುವುದಿಲ್ಲ. ಫಿರೋಜ ಚೌಗಲಾ ಮತ್ತು ಭೈರಪ್ಪ ಚೌಗಲಾ ಬಂದಾಗ ಆರೋಪಿತರು ಇದ್ದರು ಫಿರೋಜ ಚೌಗಲಾ ಮತ್ತು ಭೈರಪ್ಪ ಚೌಗಲಾ 5 ನಿಮಿಷ ಇದ್ದರು ಜಗಳ ಬಿಡಿಸಿದರು ನಂತರ ಅವರು ಹೋದರು.

10. ಪ್ರಭಾಕರ ಅವರು ತಮ್ಮ ತಂದೆ ತಾಯಿಗೆ ಅಥವಾ ಅವರ ಅಣ್ಣನಿಗೆ ಪೋನ ಮಾಡಿ ವಿಚಾರ ಹೇಳಿರುವುದಿಲ್ಲ. ನಾನು ನನ್ನ ತಂದೆ ತಾಯಿಗೆ ಪೋನ ಮಾಡಿ ಘಟನೆ ಬಗ್ಗೆ ಹೇಳಿರುವುದಿಲ್ಲ. ಫಿರೋಜ ಚೌಗಲಾ ಮತ್ತು ಭೈರಪ್ಪ ಚೌಗಲಾ ಅವರು ಆಸ್ಪತ್ರೆಗೆ ಹೋಗೊಣ ಎಂದು ಹೇಳಿದರು ಆದರೆ ನಾವು ಹೋಗಿರುವುದಿಲ್ಲ. ಮರುದಿನ ಬೆಳಿಗ್ಗೆ ಸಹ ನಾನು ಆಸ್ಪತ್ರೆಗೆ ಹೋಗಿ ತೋರಿಸಿರುವುದಿಲ್ಲ. ಊರಿನ ಹಿರಿಯರು ಮಾತುಕತೆ ಮಾಡಿ ಬಗೆಹರಿಸೋಣ ಎಂದು ಹೇಳಿದ್ದರಿಂದ ನಾನು ಆಸ್ಪತ್ರಗೆ ಹೋಗಿರುವುದಿಲ್ಲ.

11. ನಾವು ದೀಲಿಪ ಅಂಗಡಿಯಲ್ಲಿ ಮಲಗಿಕೊಂಡಾಗ ಆರೋಪಿತರೆಲ್ಲರು ರಾತ್ರಿ

ವೇಳೆಯಲ್ಲಿ ಬಂದು ನಮ್ಮ ಮೇಲೆ ಹಲ್ಲೆ ಮಾಡಿದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಪೋಲಿಸರು ನನ್ನ ವಿಚಾರಿಸಿ ಹೇಳಿಕೆ ಪಡೆದುಕೊಂಡಿದ್ದಾರೆ ಸಾಕ್ಷಿ ಸ್ವತಃ 3 ಜನರನ್ನು ಕರೆಸಿ ವಿಚಾರಿಸಿದ್ದಾರೆ ಎಂದು ಹೇಳಿದ್ದಾರೆ.

12. 6 ನೇ ಆರೋಪಿ ಪ್ರಭಾಕರನ ಗುಪ್ತಾಂಗ ಹಿಡಿದ ಹಿಚಿಕಿದರು ಎಂದು ಪೋಲಿಸರ ಮುಂದೆ ಹೇಳಿಲ್ಲ ಎನ್ನುವುದು ಸರಿಯಲ್ಲ. 4 ನೇ ಆರೋಪಿ ಸುರೇಶ ಮತ್ತು 11 ನೇ ಆರೋಪಿ ಅಪ್ಪಾಸಾಬ ಕೈಯಿಂದ ಹೊಡೆದರು ಎಂದು ನಾನು ಪೋಲಿಸರ ಮುಂದೆ ಹೇಳಿಲ್ಲ ಎನ್ನುವುದು ಸರಿಯಲ್ಲ. ಘಟನೆಯಾದ ಕೂಡಲೇ ನಿವಾಗಲಿ, ಪ್ರಭಾಕರ, ದಿಲೀಪ, ಫಿರೋಜ ಚೌಗಲಾ ಮತ್ತು ಭೈರಪ್ಪ ಚೌಗಲಾ ಪೋಲಿಸರಿಗೆ ಮಾಹಿತಿ ನೀಡಿದ್ದಿರಾ ಎನ್ನುವುದಕ್ಕೆ ಸಾಕ್ಷಿ ಫಿರೋಜ ಚೌಗಲಾ ಮತ್ತು ಭೈರಪ್ಪ ಚೌಗಲಾ ಅವರ ಊರಿನಲ್ಲಿ ಹಿರಿಯರಿಗೆ ಹೇಳಿ ಬಗೆಹರಿಸೋಣ ಎಂದು ಹೇಳಿದ್ದರಿಂದ ಆ ಸಮಯದಲ್ಲಿ ಪೋಲಿಸರಿಗೆ ಹೇಳಿಲ್ಲ ಎಂದು ಹೇಳಿದ್ದಾರೆ. ಮರುದಿನ ಬೆಳಿಗ್ಗೆ ಚೌಗಲಾ ಅವರು ಬರುತ್ತೇನೆ ಎಂದು ಹೇಳಿದ್ದರು ಆದರೆ ಬಂದಿರಲಿಲ್ಲ, ನಾವು ಅವರನ್ನು ಕರೆದಿರುವುದಿಲ್ಲ. ನಂತರ ನಾವು 3 ಜನರು ಸಂಜೆ ದೂರು ಕೂಡಲು ವಿಚಾರ ಮಾಡಿದೇವು. ದೂರು ತಯಾರಿಸಲು ನಾನು, ಪ್ರಭಾಕರ ಮತ್ತು ದೀಲಿಪ ಮಾಹಿತಿ ನೀಡಿದ್ದೇವು. ಸಂಜೆ 5.30 ಗಂಟೆ ಸುಮಾರಿಗೆ ನಾವು ಪೋಲಿಸ ಠಾಣೆಗೆ ಹೋಗಿದ್ದೇವು. ನಾವು ದೂರನ್ನು ಕಾನಸ್ಟೆಬಲ್ ಕೈಯಲ್ಲಿ ನೀಡಿದ್ದೇವೆ.

13. ನಾನು ಹೇಳಿದಂತೆ ಆ ದಿನ ಯಾವುದೆ ಘಟನೆ ಆಗಿಲ್ಲ ಎನ್ನುವುದು ಸರಿಯಲ್ಲ. ಅಣ್ಣಪ್ಪ ಹಳಿಜೋೀಳಿ ಅವರಿಗೂ, ಫಿರೋಜ ಚೌಗಲಾ ಮತ್ತು ಭೈರಪ್ಪ ಚೌಗಲಾ ಮೊದಲಿನಿಂದ ವೈರತ್ವ ಇದ್ದ ಕಾರಣ ಅಣ್ಣಪ್ಪ ಹಳಿಜೋಳಿ ಅವರ ಮೇಲೆ ಯಾವುದಾದರೂ ಕೇಸ ನೀಡಬೇಕೆಂದು ಹೇಳಿಕೊಟ್ಟು ನಮ್ಮ ಮುಖಾಂತ ಸುಳ್ಳು ಕೇಸನ್ನು ಕೊಡಿಸಿದ್ದಾರೆ ಎನ್ನುವುದು ಸರಿಯಲ್ಲ. ಸಾಕ್ಷಿ ಸ್ವತಃ ನಮ್ಮ ವೈಯಕ್ತಿಕ ವಿಚಾರದಲ್ಲಿ ನಾವು ದೂರು ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ಈ ಘಟನೆಯನ್ನು ಹೊರತು ಪಡಿಸಿ ನಮಗೂ ಆರೋಪಿತರಿಗೂ ಯಾವುದೆ ಹಣಕಾಸಿನ ವೈರತ್ವ ಇರುವುದಿಲ್ಲ ಎನ್ನುವುದು ಸರಿ.

**ಪಾಟೀ ಸವಾಲುಃ 1, 2, 5, 6 ಮತ್ತು 9 ನೇ ಆರೋಪಿತರ ಪರ**

**ಶ್ರೀ.ಆರ್.ಸಿ.ಪಿ ವಕೀಲರಿಂದಃ**

14. ನಾನು ಪೋಲಿಸರಿಗೆ 2 ನೇ ತಾರಿಖಿನಂದು ಹೇಳಿಕೆ ನೀಡಿದ್ದೇನೆ. ದೂರು ಕೊಟ್ಟ ದಿನ

ಬಿಟ್ಟು ಬೇರೆ ಹೇಳಿಕೆ ನೀಡಿರುವುದಿಲ್ಲ. ನಾನು 5 ನೇ ತರಗತಿವರೆಗೆ ಶಾಲೆ ಕಲಿತಿದ್ದೇನೆ. ನಮ್ಮ ಮನೆ ಮೊರಬದಲ್ಲಿ 2 ನೇ ವಾರ್ಡನಲ್ಲಿದೆ. ಚಾಸಾ–3 ಮಹಾದೇವ ಅಸೂದೆ ಮತ್ತು ಚಾಸಾ–8 ದೀವಾಕರ ಅಸೂದೆ ನನ್ನ ಅಣ್ಣ ತಮ್ಮಂದಿರು ಎನ್ನುವುದು ಸರಿ. ಅವರು ನಮ್ಮ ವಾರ್ಡಿನಲ್ಲಿ ವಾಸ ಇದ್ದಾರೆ ಎನ್ನುವುದು ಸರಿ. ಫಿರೋಜ ಚೌಗಲಾ ಮತ್ತು ಭೈರಪ್ಪ ಚೌಗಲಾ ಅವರು ಚುನಾವಣೆ ಸ್ಪರ್ಧಿಸಿದ ವಿಚಾರ ನನಗೆ ಗೊತ್ತಿರುವುದಿಲ್ಲ. ಅವರು ಬೇರೆ ವಾರ್ಡನಲ್ಲಿ ಸ್ಪರ್ಧಿಸಿದ್ದಾರೆ.

15. ಚಾಸಾ–3 ಮಹಾದೇವ ಅಸೊದೆ, ಚಾಸಾ–8 ದಿವಾಕರ ಅಸೊದೆ ಪಂಚಾಯತಿ ಸದಸ್ಯರಾಗಿದ್ದರು ಎನ್ನುವುದು ಸರಿ. 7 ನೇ ಆರೋಪಿ ಚುನಾವಣೆಗೆ ಸ್ಪರ್ಧಿಸಿದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಚುನಾವಣೆಗೆ ಯಾರ್ಯಾರು ಸ್ಪರ್ಧಿಸಿದ್ದರು ಎನ್ನುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. 11 ಜನ ಆರೋಪಿತರಗಳು ನನಗೆ ಗೊತ್ತಿರುತ್ತದೆ. ಅವರ ಗಂಡನ ಹೆಸರು ಮನೆತನದು ಹೆಸರು ನನಗೆ ಹೇಳಲು ಆಗುತ್ತದೆ.

16. 1 ನೇ ಆರೋಪಿ ಅಣ್ಣಪ್ಪ ಹಳಿಜೋಳಿ ಅವರು ಜಾತಿ ಹೆಸರು ಹಿಡಿದು ಅವಮಾನ ಮಾಡಿ ಪ್ರಭಾಕರ ಎಲ್ಲಿದ್ದಾನೆ ಎಂದು ಕೇಳಿದರು ಪೋಲಿಸರ ಮುಂದೆ ನಾನು ನೀಡಿದ ಹೇಳಿಕೆಯಲ್ಲಿ ಹೇಳಿಲ್ಲ ಎನ್ನುವುದು ಸರಿಯಲ್ಲ. 4 ನೇ ಆರೋಪಿ ಸುರೇಶ 11 ನೇ ಆರೋಪಿ ಅಪ್ಪಾಸಾಬ ದೀಲಿಪನಿಗೆ ಹೊಡೆದರು ಎಂದು ನಾನು ಪೋಲಿಸರ ಮುಂದೆ ನೀಡಿದ ಹೇಳಿಕೆಯಲ್ಲಿ ಹೇಳಿಲ್ಲ ಎನ್ನುವುದು ಸರಿಯಲ್ಲ. ದುರ್ಗಾದೇವಿ ಗುಡಿ ಹತ್ತಿರ ನಮ್ಮ ಮನೆ ಇದೆ ಎಂದು ಬರೆಸಿದ್ದಾರಾ ಎನ್ನುವುದಕ್ಕೆ ಸಾಕ್ಷಿ ಹೌದು ಎಂದು ಹೇಳಿ ಸಾಕ್ಷಿ ಮುಂದೆ ಅಂಗನವಾಡಿ ಹತ್ತಿರ ಇದೆ ಎಂದು ಹೇಳಿದ್ದಾರೆ.

17. 1 ನೇ ಆರೋಪಿ ಅಣ್ಣಪ್ಪ ಹಳಿಜೋಳಿ ಅವರು ಮೂಲತಃ ನಮ್ಮ ಊರಿನವರಲ್ಲ ಎನ್ನುವುದಕ್ಕೆ ಸಾಕ್ಷಿ ಅವರು ನಮ್ಮ ಊರಿನಲ್ಲೆ ಇದ್ದಾರೆ ಎಂದು ಹೇಳುತ್ತಾರೆ. 1 ನೇ ಆರೋಪಿ ಶ್ರೀಮಂತರು ಹೆಚ್ಚು ಆಸ್ತಿ ಇದೆ ಎನ್ನುವುದು ಸರಿಯಲ್ಲ. ಅವರು ನಮ್ಮಂತೆಯೇ ಇದ್ದಾರೆ. ಚಾಸಾ–7 ಬೈರು ಚೌಗಲಾ ಸೊಸೈಟಿ ನಡೆಸುತ್ತಾರೆ ಎನ್ನುವುದು ಸರಿ. ಅವರು ಪಂಚಾಯತಿ ಸದಸ್ಯರು ಎನ್ನುವುದು ನನಗೆ ಗೊತ್ತಿಲ್ಲ. ಘಟನೆಯಾಗುವ ಒಂದು ದಿನ ಮೊದಲು ಬೈರು ಚೌಗಲಾ ಅವರ ಅಣ್ಣತಮ್ಮಂದಿರ ಮೇಲೆ 2 ನೇ ಆರೋಪಿ ದೂರು ನೀಡಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ಯಾವುದೇ ಘಟನೆ ಆಗಿಲ್ಲ ನಾನು ಬೈರಪ್ಪ ಚೌಗಲಾ ಅವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಯಾವುದೆ ಘಟನೆ

ಆಗದಿದ್ದರು ನಾನು ಆರೋಪಿತರ ವಿರುದ್ಧ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಾನು ಸರಕಾರದಿಂದ ಪರಿಹಾರ ಪಡೆದಿರುವುದಿಲ್ಲ. ಆರೋಪಿತರು ನನಗಾಗಲಿ ಪ್ರಭಾಕರನಿಗಾಗಲಿ ಜಾತಿ ಹೆಸರು ಹಿಡಿದು ಬೈದಿರುವುದಿಲ್ಲ ಎನ್ನುವುದು ಸರಿಯಲ್ಲ.

**ಪಾಟೀ ಸವಾಲುಃ 3 ಮತ್ತು 7 ನೇ ಆರೋಪಿತರ ಪರ ಶ್ರೀ.ಎಸ್.ಸಿ.ಜೆ ರವರ ಪರವಾಗಿ ಎಮ್.ಎಮ್.ಬಿ ವಕೀಲರಿಂದಃ**

ಉಳಿದಂತೆ, ಶ್ರೀ.ಆರ್.ಸಿ.ಪಿ. ವಕೀಲರು ಮತ್ತು ಯು.ಜಿ.ಬಿ ವಕೀಲರು ಮಾಡಿರುವ ಪಾಟೀ ಸವಾಲನ್ನು ತಮ್ಮ ಪಾಟೀ ಸವಾಲೆಂದು ಅಳವಡಿಸಿಕೊಂಡಿದ್ದಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.